ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರಾದ ಮೈಕೇಲ್ ಪರ್ನಾಂಡಿಸ್ ಅವರು ಮತ್ತು ಶ್ರೀಮತಿ ನಾಗರತ್ನಮ್ಮನವರು ಇದರ ಬಗ್ಗೆ ವಿಷಯಗಳನ್ನು ಸವಿಸ್ತಾರವಾಗಿ ಹೇಳಿದ್ದಾರೆ. ಇಲ್ಲಿಯ ಮಾಲೀಕರು ಗೌರವಾನ್ವಿತ ಮಹಿಳೆಯರಾಗಿದ್ದಾರೆ, ಅಲ್ಲಿ ಕೆಲಸ ಮಾಡತಕ್ಕವರೂ ಸಹ ಗೌರವಾನ್ವಿತ ಕಾರ್ಮಿಕರು ಆಗಿರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾಲೀಕರ ತರಹ ವರ್ತನೆ ಮಾಡಿದರೆ, ಅನ್ಯಾಯ ಮಾಡಿದರೆ, ಶೋಷಣೆ ಮಾಡಿದರೆ ಅವರನ್ನು ಏನೆಂದು ಕರೆಯಬೇಕು ?

ಅಧ್ಯಕ್ಷರು.—ಇದನ್ನು ನಾವು ಸೋಷಿಯಲ್ ಒಲ್‌ಫೇರ್ ಅಸೋಸಿಯೇಷನ್ ಎಂದು ಅಷ್ಟಕ್ಕೆ ಮಾತ್ರ ಸೀಮಿತವಾಗಿಟ್ಟುಕೊಳ್ಳೋಣ. ಈಗ ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ತಮ್ಮ ಪ್ರಸ್ತಾವನೆಯ ಬಗ್ಗೆ ಮಾತನಾಡಬಹುದು.

(vi) ಚೆನ್ನರಾಯಪಟ್ಟಣ ಕಾಳೇನಹಳ್ಳಿಯಲ್ಲಿ ಒಬ್ಬ ವಿವಾಹಿತ ತರುಣಿಯ ಅಪಹರಣದ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ,—ಮಾನ್ಯ ಅಧ್ಯಕ್ಷರೇ, ರೂಲ್ 334ರ ಪ್ರಕಾರ 28ನೇ ತಾರೀಖು ರಾತ್ರಿ ಡಿ. ಕಾಳೇನಹಳ್ಳಿಯಿಂದ ಚೆನ್ನರಾಯಪಟ್ಟಣಕ್ಕೆ ಸಿನಿಮಾ ನೋಡಲು ಬಂದಂಥ ಶ್ರೀಮತಿ ಲೀಲಾವತಿ ಹೇಳುವಂಥ ವಿವಾಹಿತ ತರುಣಿಯ ಅಪಹರಣದ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಈ ಅಪಹರಣಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ನಿನ್ನೆಯ ದಿವಸ ಚೆನ್ನರಾಯಪಟ್ಟಣದಲ್ಲಿ ಒಂದು ಗಲಭೆಯೂ ಕೂಡ ಆಯಿತು. ಇದರ ಬಗ್ಗೆ ಕಾರಣರಾದವರನ್ನು ಹುಡುಕಲು ಪೋಲೀಸರು ಇನ್ನೂ ಸಫಲರಾಗಿಲ್ಲ. ಪೋಲೀಸರು ಪೋಲೀಸ್ ನಾಯಿಯನ್ನು ಕಳುಹಿಸಿದ್ದಾರೆ. ಒಂದು ಕಿಲೋಮೀಟರು ದೂರದಲ್ಲಿ ಮಹಿಳೆಯ ಕರವಸ್ತ್ರ ಮತ್ತು ಚಪ್ಪಲಿ ಸಿಕ್ಕಿದೆ ಎಂದು ವರ್ತಮಾನ ಬಂದಿದೆ. ಏತನ್ಮಧ್ಯೆ ಅವರನ್ನು ಅಪಹರಿಸಲಿಕ್ಕೆ ಕಾರಣೀಭೂತರಾದ ರಾಮು ಎಂಬುವರು ಸಿಕ್ಕಿದ್ದಾರೆ. ಶ್ರೀಮತಿ ಲೀಲಾವತಿ ಮತ್ತು ರಮೇಶ ಇವರು ಇಬ್ಬರ ಬಗ್ಗೆ ಯಾವುದೇ ಮಾಹಿತಿಯನ್ನು ಪೋಲೀಸರು ಸಂಗ್ರಹಣೆ ಮಾಡುವುದರಲ್ಲಿ ವಿಫಲರಾಗಿದ್ದಾರೆ ಎಂದು ಜನತೆ ಅಲ್ಲಿಯೂ ಕೂಡ ಪ್ರತಿಭಟನೆ ಮಾಡಿದ್ದಾರೆ. ಅಲ್ಲಿ ಅಶ್ರುವಾಯು ಪ್ರಯೋಗ ಕೂಡ ಆಗಿದೆ. ಸಿನಿಮಾ ಥಿಯೇಟರ್‌ಗೆ ಸಾಕಷ್ಟು ಡ್ಯಾಮೇಜ್ ಕೂಡ ಆಗಿದೆ. ಈ ವಿಚಾರದಲ್ಲಿ ಅಲ್ಲಿ ಬಹಳ ಗೊಂದಲ ಮತ್ತು ಕಳವಳ ಜನರಲ್ಲಿ ಹುಟ್ಟಿದೆ. ಅದರಲ್ಲಿಯೂ ಸಿನಿಮಾ ಥಿಯೇಟರ್‌ನಿಂದ ಹೊರಗೆ ಬಂದಮೇಲೆ, ಜನರು ಇರತಕ್ಕ ಸಂದರ್ಭದಲ್ಲಿ ಮಹಿಳೆಯನ್ನು ಕಾರಲ್ಲಿ ತೆಗೆದುಕೊಂಡು ಹೋಗಿದ್ದನ್ನು ಪತ್ತೆ ಹಚ್ಚಲಿಕ್ಕೆ ಮತ್ತು ಶ್ರೀಮತಿ ಲೀಲಾವತಿಯನ್ನು ಪತ್ತೆ ಹಚ್ಚಲಿಕ್ಕೆ ಪೋಲೀಸರಿಗೆ ಅಸಾಧ್ಯವಾಗಿದೆ. ಒಬ್ಬ ವಿವಾಹಿತ ಮಹಿಳೆಯ ಈ ಅಪಹರಣವನ್ನು ಮುಚ್ಚಿಹಾಕಲಿಕ್ಕೆ ಪ್ರಯತ್ನಗಳು ನಡೆಯುತ್ತಿವೆ ಎಂದು ಆಪಾದನೆಗಳು ಕೂಡ ಬಂದಿವೆ. ಈ ವಿಚಾರದಲ್ಲಿ ಹೆಚ್ಚು ವಿವರಗಳನ್ನು ಸರ್ಕಾರದವರು ಕೊಡಬೇಕಾಗುತ್ತದೆ. ಏಕೆಂದರೆ ಜನಗಳಲ್ಲಿ ಇವತ್ತು ಇರತಕ್ಕ ಕಳವಳ ಆದೂ ಕೂಡ ಇಷ್ಟು ಸಾಕ್ಷಿ ಇದ್ದಂಥ ಕೇಸಿನಲ್ಲಿಯೂ ಕೂಡ ಇಷ್ಟು ಸಮಯದಲ್ಲಿ ಅಪರಾಧಿಯನ್ನು ಪತ್ತೆ ಹಚ್ಚಲಿಕ್ಕೆ ಕಷ್ಟವಾಗಲಾರದು. ಹಿಂದೆ ಇದಕ್ಕೂ ದೊಡ್ಡ ಕೇಸನ್ನು ಪತ್ತೆ ಹಚ್ಚಿರುವವರಿಗೆ ಇದನ್ನು ಪತ್ತೆ ಹಚ್ಚಲಿಕ್ಕಾಗಲಿಲ್ಲ. ಏಕೆ ಸಾಧ್ಯವಾಗಲಿಲ್ಲ ಎನ್ನುವಂಥ ಅನುಮಾನ ಅಲ್ಲಿಯ ಜನರಲ್ಲಿ ಬಂದಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಬೇಕು.

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯಮಂತ್ರಿಗಳು) :—

(1) ದಿನಾಂಕ 29-8-1983 ರಂದು ಮಧ್ಯಾಹ್ನ 3-45 ಗಂಟೆಗೆ ಶ್ರೀ ಕೆ. ಎಂ. ಲಕ್ಷ್ಮೀಗೌಡ, ಡಿ. ಕಾಳೇನಹಳ್ಳಿ ವಾಸಿ ಇವರು ಚೆನ್ನರಾಯಪಟ್ಟಣ ಪೋಲೀಸ್ ಠಾಣೆಗೆ ಬಂದು ಒಂದು ದೂರನ್ನು ನೀಡಿದರು.

(2) ಅವರ ಹೇಳಿಕೆಯ ಪ್ರಕಾರ ದಿನಾಂಕ 28-8-1983 ರಂದು ಶ್ರೀಮತಿ ಲೀಲಾವತಿ ಗಂಡ ಶ್ರೀ ಜಾನಕೀರಾಮ್, ವಯಸ್ಸು 18 ವರ್ಷ, ನಿವಾಸಿ ಕೆ. ಬೊಮ್ಮನಹಳ್ಳಿ, ಶ್ರವಣಬೆಳಗೊಳ ಹೋಬಳಿ. ಇವರನ್ನು ಈ ಕೆಳಕಂಡ ಅಪರಾಧಿಗಳು ಅಪಹರಣ ಮಾಡಿಕೊಂಡು ಹೋದರೆಂದು ತಿಳಿಸಿದರು.

1. ರಾಜಪ್ಪ
2. ಅಣ್ಣಯ್ಯ
3. ಮಹದೇವ
4. ಅಶೋಕ್
5. ಗುರು ಸ್ವಾಮಿ ತಂದೆ ಸಿದ್ಧಲಿಂಗೇಗೌಡ, ಮಾಜಿ ಪುರಸಭಾ ಅಧ್ಯಕ್ಷ
6. ಬಸವರಾಜ್
7. ರಮೇಶ್
8. ರಾಮ
9. ಬಾಬು, ತಂದೆ ಎ. ಆರ್ ರಾಮಯ್ಯ (ಕಾಂಗ್ರೆಸ್ (ಐ) ಲೀಡರ್
10. ಗೆಸ್ಟ್, ಎಲ್ಲರೂ ಚೆನ್ನರಾಯಪಟ್ಟಣ ವಾಸಿಗಳು.

(3) ಶ್ರೀಮತಿ ಲೀಲಾವತಿಯವರು ಡಿ. ಕಾಳೇನಹಳ್ಳಿಯಿಂದ ಚನ್ನರಾಯಪಟ್ಟಣಕ್ಕೆ ಸಿನಿಮಾ ನೋಡಲು ಧನಂಜಯ ಎಂಬ 10 ವರ್ಷದ ಹುಡುಗನ ಜೊತೆ ಬಂದಿದ್ದರು. ಬಾಲಾಜಿ ಟಾಕೀಸಿನಲ್ಲಿ ಸಿನಿಮಾ ನೋಡಿದ ನಂತರ ಲೀಲಾವತಿ ಮತ್ತು ಧನಂಜಯ ಇವರು ಅವರ ಸಂಬಂಧಿಗಳಾದ ಶ್ರೀಮತಿ ಸುಭದ್ರಮ್ಮ ಎಂಬುವರ ಮನೆಗೆ ಹೋದರು. ಧನಂಜಯನು ಲೀಲಾವತಿಯವರನ್ನು ಅಲ್ಲಿಯೇ ಬಿಟ್ಟು ಡಿ. ಕಾಳೇನಹಳ್ಳಿಗೆ ಹೊರಟು ಹೋದನು. ಸುಮಾರು 9.30 ಗಂಟೆಯ ಸಮಯದಲ್ಲಿ ಲೀಲಾವತಿಯವರು ಡಿ. ಕಾಳೇನಹಳ್ಳಿಗೆ ವಾಪಸ್‌ಹೊರಟರು. ಹೋಗುವಾಗ ಬಾಲಾಜಿ ಟಾಕೀಸಿನ ಬಳಿ ಯಾರಾದರೂ ಹೆಂಗಸರು ಹಳ್ಳಿಗೆ ಹೋಗುವವರಿದ್ದಾರೆಯೋ ಎಂದು ನೋಡಲು ಬಂದರು. ಆ ಸಮಯದಲ್ಲಿ ಬಾಲಾಜಿ ಟಾಕೀಸಿನ ಗೇಟ್ ಕೀಪರ್ ರಾಜಪ್ಪ, ಬುಕಿಂಗ್ ಗುಮಾಸ್ತ ಅಶೋಕ್ ಮತ್ತೆ ಮೇಲ್ಕಾಣಿಸಿದ ಇತರೆ 8 ಜನ ಇವರನ್ನು ಕಾರ್ ನಂಬರ್ ಎಂ.ಇ.ಎಸ್. 4161 ಇದರಲ್ಲಿ ಬಲಾತ್ಕಾರದಿಂದ ನುಗ್ಗಿಸಿ ಕರೆದುಕೊಂಡು ಹೋದರು. ಈ ದೂರಿನ ಮೇಲೆ ಚನ್ನರಾಯಪಟ್ಟಣ ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 113.83 ಕಲಂ 366 ಭಾರತೀಯ ದಂಡ ಸಂಹಿತೆ ಯ ಪ್ರಕಾರ ಕೇಸನ್ನು ದಾಖಲು ಮಾಡಿಕೊಳ್ಳಲಾಯಿತು.

(4) ದಿನಾಂಕ 29-8-1983ರ ದಿವಸ ಪೋಲೀಸ್ ಸಿಬ್ಬಂದಿಯನ್ನು ಪಾಂಡವಪುರ, ಮೈಸೂರು, ಕೃಷ್ಣರಾಜನಾಗರ, ಹಾಸನ ಮತ್ತು ಇತರೆ ಆಸುಪಾಸು ಜಾಗಗಳಿಗೆ ಕಳುಹಿಸಿಕೊಡಲಾಯಿತು. ಅಂದು ಲೀಲಾವತಿಯವರು ಪತ್ತೆ ಆಗಲಿಲ್ಲ.

(5) ದಿನಾಂಕ 30-8-1983 ರಂದು ಮಧ್ಯಾಹ್ನ 3 ಘಂಟೆ ವೇಳೆಗೆ 8 ಜನ ಅಪರಾಧಿಗಳನ್ನು, ರಮೇಶ ಮತ್ತು ಬಸವರಾಜ ಇವರನ್ನು ಉಳಿದು ದಸ್ತಗಿರಿ ಮಾಡಲಾಯಿತು. ಇವರೆಲ್ಲರನ್ನೂ 31-8-1983 ರಂದು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಗುವುದು.

(6) ಇಷ್ಟರಲ್ಲಿ ಸುಮಾರು ನಾಲ್ಕು-ನಾಲ್ಕೂವರೆ ಘಂಟೆ ಸಮಯಕ್ಕೆ 2 ಸಾವಿರ ಜನ ಠಾಣೆಯ ಹತ್ತಿರ ಸೇರಿಕೊಂಡರು. ಸ್ಥಳದಲ್ಲಿಯೇ ಹಾಜರಿದ್ದ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಇತರೆ ಪೋಲೀಸ್ ಸಿಬ್ಬಂದಿಯವರು ಗುಂಪಿನ ಜನರಿಗೆ ಪೋಲೀಸರು ಕ್ರಮ ಕೈಗೊಂಡಿರುವುದರ ಬಗ್ಗೆ ತಿಳಿಸಿದರು. ಅಪರಾಧಿಗಳನ್ನು ದಸ್ತಗಿರಿ ಮಾಡಲಾಗಿದೆ ಹಾಗೂ ಅವರ ವಿರುದ್ಧ ಕಾನೂನು ರೀತ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಆದರೂ ಗುಂಪಿನಲ್ಲಿದ್ದ ಅನೇಕ ಜನ ಈ ಅಪರಾಧಿಗಳನ್ನು ತಮ್ಮ ಸಮ್ಮುಖದಲ್ಲಿ ಹಾಜರುಪಡಿಸಿ ಅವರಿಗೇ ಒಪ್ಪಿಸಬೇಕೆಂದು ಒತ್ತಾಯಗೊಳಿಸಿದರು. ಇಷ್ಟರಲ್ಲಿ ಕೆಲವು ತಿಳಿಗೇಡಿಗಳು ಕಲ್ಲು ತೂರಾಟ ಪ್ರಾರಂಭಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗಿದ್ದರಿಂದ ಅಶ್ರುವಾಯು ಪ್ರಯೋಗವನ್ನು ಮಾಡಲಾಯಿತು. 11 ಶೆಲ್‌ಗಳನ್ನು ಸಿಡಿಸಲಾಗಿದೆ.

(7) ಇಷ್ಟರಲ್ಲಿ ಪೋಲೀಸ್ ಸೂಪರಿಂಟೆಂಡೆಂಟರು, ಸ್ಪೆಷಲ್ ಡೆಪ್ಯೂಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್, ಹಾಸನ, ಇವರುಗಳು ಸುಮಾರು 5-30 ಘಂಟೆಗೆ ಸಶಸ್ತ್ರ ಪಡೆಯ ತುಕಡಿಯೊಂದಿಗೆ ಚನ್ನರಾಯಪಟ್ಟಣಕ್ಕೆ ಬಂದರು. ಅಲ್ಲಿ ನೆರೆದಿದ್ದ ಗುಂಪನ್ನು ಚದುರಿಸಲಾಯಿತು.

(8) ಈ ಸಂದರ್ಭದಲ್ಲಿ ಗುನ್ನೆ ಸಂಖ್ಯೆ 115:83 ಕಲಂ 147, 143, 144, 149, 323, 353 ಭಾರತೀಯ ದಂಡ ಸಂಹಿತೆಯ ಪ್ರಕಾರ ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ.

(9) ಇದೇ ಸಮಯದಲ್ಲಿ ಸುಮಾರು 4 ಘಂಟೆಗೆ 200 ಜನರಷ್ಟು ಗುಂಪು ಬಾಲಾಜಿ ಟಾಕೀಸ್ ಒಳಗೆ ನುಗ್ಗಿ ಅಲ್ಲಿಯ ಪೀಠೋಪಕರಣಗಳನ್ನು ಮತ್ತು ವಿದ್ಯುತ್ ಉಪಕರಣಗಳನ್ನು ನಾಶಮಾಡಿತು. ವರ್ತಮಾನ ತಿಳಿದ ಪೋಲೀಸರು ಸ್ಥಳಕ್ಕೆ ಧಾವಿಸಿ ಗುಂಪನ್ನು ಓಡಿಸಿದರು. ಈ ವಿಚಾರದಲ್ಲಿ ಗುನ್ನೆ ಸಂಖ್ಯೆ 116:83 ಕಲಂ 143, 144, 147, 149, 448, 427 ಭಾ. ದ. ಸಂಹಿತೆಯ ಪ್ರಕಾರ ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ.

(10) ಸಂಜೆ ಸುಮಾರು 6-15 ಘಂಟೆಗೆ ಶ್ರವಣಬೆಳಗೊಳ ಪೋಲೀಸ್ ಔಟ್‌ಪೋಸ್ಟ್‌ನಿಂದ ಶ್ರೀಮತಿ ಲೀಲಾವತಿಯವರು ಶ್ರವಣಬೆಳಗೊಳದಲ್ಲಿ ಸಿಕ್ಕಿದ್ದಾರೆಂದು ಟೆಲಿಫೋನ್ ಸಂದೇಶ ಬಂದಿತು. ತಕ್ಷಣವೇ ಪೋಲೀಸ್ ಪಾರ್ಟಿಯೊಂದನ್ನು ಕಳುಹಿಸಿ ಅವರನ್ನು ಕರೆತರಲಾಯಿತು. ಅವರು ತಮ್ಮ ಹೇಳಿಕೆಯನ್ನು ನೀಡಿದ್ದಾರೆ. ಇಬ್ಬರು ಬಲಾತ್ಕಾರವಾಗಿ ಅವರ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂಬುದನ್ನೂ ಸಹ ವ್ಯಕ್ತಪಡಿಸಿದ್ದಾರೆ. ಇವರನ್ನು ರಾತ್ರಿ 10 ಘಂಟೆ ಸುಮಾರಿಗೆ ವೈದ್ಯಕೀಯ ಪರೀಕ್ಷೆಗೆ ಅವರ ಯಜಮಾನರ ಸಂಗಡ ಕಳುಹಿಸಿಕೊಡಲಾಯಿತು.

(11) ಚನ್ನರಾಯಪಟ್ಟಣದಲ್ಲಿ ಪ್ರತಿಬಂಧಕಾಜ್ಞೆಯನ್ನು 5-9-1983ರ ವರೆಗೆ ಜಾರಿ ಮಾಡಲಾಗಿದೆ. ಮೈಸೂರು ಡಿ.ಐ.ಜಿ.ಯವರು ಚನ್ನರಾಯಪಟ್ಟಣದಲ್ಲಿ ವಾಸ್ತವ್ಯ ಮಾಡಿದ್ದಾರೆ. 4 ಪ್ಲಾಟೂನ್ ಸಶಸ್ತ್ರ ಪಡೆಯ ತುಕಡಿಗಳು ಅಲ್ಲಿಯೇ ಇವೆ. ಸದ್ಯಕ್ಕೆ ಪರಿಸ್ಥಿತಿ ಶಾಂತವಾಗಿದೆ. ಅಪರಾಧಿಗಳ ಮೇಲೆ ಕಾನೂನು ರೀತ್ಯ ಉಗ್ರ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಈ ತನಿಖೆಯನ್ನು ಅರಕೀರೆ ಪೋಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟ್‌ರವರು ಖುದ್ದಾಗಿ ಮಾಡುತ್ತಿದ್ದಾರೆ.